## ಅತ್ಯಾಚಾರ ವಿರೋಧಿ ಸಂಚಿಕೆ

ಡಿ. 19ರ ಅತ್ಯಾಚಾರಿ ವಿರೋಧಿ ಸಂಚಿಕೆಯ ಎಲ್ಲಾ ಲೇಖನಗಳು ಔಚಿತ್ಯಪೂರ್ಣವಾಗಿವೆ. ದೇಶದ ವಿವಿಧ ಪ್ರದೇಶದಲ್ಲಿ ಆಗಾಗ್ಗೆ ಘಟಿಸುವ ಇಂಥ ಘಟನೆಗಳು ಸಮಾಜದಲ್ಲಿ ಭೀತಿ ಹುಟ್ಟಿಸುತ್ತವೆ. ಇಂದು 'ಸಾಂತ್ವನ ಬೇಡ, ನ್ಯಾಯ ಬೇಕು' ಎನ್ನುವ ಆಗ್ರಹ ದೇಶದ ಜನರ ಒಕ್ಕೊರಲ ಧ್ವನಿಯಾಗಿದೆ. ಸ್ವಾತಂತ್ರ್ಯ ಬಂದು ಹಲವು ದಶಕಗಳೇ ಉರುಳಿದರೂ ಸ್ತ್ರೀಯರಿಗೆ ಸ್ವಾತಂತ್ರ್ಯ ಎಷ್ಟರ ಮಟ್ಟಿಗೆ ದೊರೆತಿದೆ ಎಂಬುದನ್ನು ಕಣ್ಣರಳಿಸಿ ನೋಡಬೇಕಿದೆ. ಹೃದಯ ಕಲಕುವ ಮುಖಪುಟ ಚಿತ್ರ, ಎಲ್ಲಾ ಲೇಖನಗಳು ಒಂದು ಕ್ಷಣ ಭಾವುಕನನ್ನಾಗಿ ಮಾಡಿ ವಿಷಾದದಿಂದ ಕಣ್ಣಂಚಿನಲ್ಲಿ ನೀರು ಜಿನುಗಿತು.

—ಎಚ್.ಎನ್. ಕಿರಣ್ ಕುಮಾರ್ ಹಳೇಹಳ್ಳಿ,
ಎಚ್.ಎ. ನಂದಕುಮಾರ್ ಚಿತ್ರದುರ್ಗ

ಈ ಕೃತ್ಯಕ್ಕೆ ಮದ್ಯಪಾನ, ಗಾಂಜಾ ಮುಂತಾದ ಮಾದಕ ವಸ್ತು ಸೇವಿಸುವುದೂ ಒಂದು ಕಾರಣ ಎನ್ನುವುದಂತೂ ಹೌದು. ಸಮಾಜ ಈ ನಿಟ್ಟಿನಲ್ಲಿ ಸಹ ಗಮನ ಹರಿಸಬೇಕು.

—ನಗರ ಗುರುದೇವ್ ಭಂಡಾರ್ಕರ್, ಶಿವಮೊಗ್ಗ



'ಅತ್ಯಾಚಾರಕ್ಕೆ ಧಿಕ್ಕಾರ' ಸಂಚಿಕೆಯಲ್ಲಿ ಪ್ರಕಟವಾಗಿರುವ ಹಲವಾರು ವಿಷಯಗಳು ಕಾಮಾಂಧರ ಮುಖಕ್ಕೆ ರಾಚುವಂತಿವೆ. ಪುರುಷನ ಕ್ಷಣಿಕ ಸುಖಕ್ಕೆ ಬಲಿಯಾದ ಸಂತ್ರಸ್ತರ ಬದುಕು ಕುರಿತ ಅರಿವು ಮೂಡಿಸುವ ಲೇಖನಗಳು ನಿಜಕ್ಕೂ ಪ್ರಸ್ತುತ.

—ಪ. ಚಂದ್ರಕುಮಾರ ಗೌನಹಳ್ಳಿ

## ಸಮಯೋಚಿತ ಸಂಪಾದಕೀಯ..

ಡಿ. 19ರ ಸಂಚಿಕೆಯಲ್ಲಿ ರಘುನಾಥ ಚ.ಹ. ಬರೆದಿರುವ ಸಂಪಾದಕೀಯ ನಿಜಕ್ಕೂ ಅರ್ಥಪೂರ್ಣ ಮತ್ತು ಚಿಂತನೆಗೀಡು ಮಾಡುವಂತಿದೆ.

ವರ್ತಮಾನ ಸಂದರ್ಭದಲ್ಲಿ ಮನುಷ್ಯ, ನೈತಿಕತೆಯ ಪಾತಳಿಯನ್ನು ಮೀರಿದ ಮೃಗೀಯ ಗುಣಗಳನ್ನು ಮೈಗೂಡಿಸಿಕೊಂಡು ಅಮಾನುಷ ಕೃತ್ಯದಲ್ಲಿ ತೊಡಗಿಸಿಕೊಂಡಿದ್ದಾನೆ. ಇದರ ಹಿಂದಿನ ಕಾರಣಗಳನ್ನು ಶೋಧಿಸುತ್ತಲೇ ಸ್ವಸ್ಥ ಸಮಾಜದ ನಿರ್ಮಾಣದ ಹಿನ್ನೆಲೆಯಲ್ಲಿ ನಮ್ಮ ಸಂವಿಧಾನ ರೂಪಿಸಿರುವ ಪ್ರಜಾಸತ್ತಾತ್ಮಕ ಮಾರ್ಗದ ಅನುಸರಣೆಯ ಅಗತ್ಯವನ್ನೂ ಈ ಲೇಖನ ಒತ್ತಿಹೇಳುತ್ತದೆ.

ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ರೂಪಿಸಿದ ನೀತಿಸಂಹಿತೆಯನ್ನು ಉಲ್ಲಂಘಿಸಿದಾಗ ವ್ಯವಸ್ಥೆಯ ಮೇಲೆ ಆಗಬಹುದಾದ ಘೋರವಾದ ಪರಿಣಾಮದ ಅಗಾಧತೆಯನ್ನು ಅರಿವಿಗೆ ತರುತ್ತದೆ. ಇಡೀ ಸಂಚಿಕೆಯ ಓದಿಗೆ ಉತ್ತಮ ಆರಂಭವನ್ನು ಈ ಬರಹ ಒದಗಿಸುತ್ತದೆ.

—ಕಲ್ಲೇಶ್ ಕುಂಬಾರ್, ಹಾರೂಗೇರಿ
ಸೀತಾ ಕೇಶವ ಸಿಡ್ನಿ

## ಕುಕೂ ಕುಕ್ಕೂ

ಡಿ19. ಸಂಚಿಕೆಯ ಡಿ.ಜಿ. ಮಲ್ಲಿಕಾರ್ಜುನ ಅವರ 'ಕುಕೂ ಕುಕ್ಕೂ' ಲೇಖನ, ಕಳೆದ ವಾರ ನಮ್ಮನೆಗೆ ಸೇರಿದ ಕುಕ್ಕೂ ಗಡಿಯಾರದ ಇತಿಹಾಸ, ಮೂಲ ಮತ್ತು ವೈಶಿಷ್ಟ್ಯಗಳನ್ನು ಎತ್ತಿ ಹಿಡಿದು, ನಮ್ಮನ್ನು ಹೆಮ್ಮೆಯ ಒಡೆಯರನ್ನಾಗಿಸಿತು.

—ಗುರುರಾಜ ಜೋಶಿ, ಬೆಂಗಳೂರು

## ಚಳಿಗಾಲಕ್ಕೆ ಬಿಸಿ ಬಿಸಿ ಸಲಹೆ!

ಡಿ. 12 ಸಂಚಿಕೆಯು ಚಳಿಯಲ್ಲಿ ಆರೋಗ್ಯ ರಕ್ಷಣೆಯ ಬಗ್ಗೆ ವಿವಿಧ ಲೇಖಕರು ಬರೆದ ವಿವಿಧ ಲೇಖನಗಳು ಈ ಚಳಿಯಲ್ಲಿ ಬಿಸಿಯಾದ ಸಲಹೆಗಳನ್ನು ನೀಡುವಲ್ಲಿ ಯಶಸ್ವಿಯಾಗಿವೆ. ಈ ಚಳಿಯಲ್ಲಿ ತೆಗೆದುಕೊಳ್ಳಬೇಕಾದ ಆಹಾರಗಳು, ಚರ್ಮದ ರಕ್ಷಣೆ, ಧರಿಸಬೇಕಾದ ಉಡುಪುಗಳ ಬಗ್ಗೆ ತಜ್ಞರು ನೀಡಿದ ಸಲಹೆಗಳು ತುಂಬಾ ಉಪಯುಕ್ತವಾಗಿವೆ.

—ಎಚ್. ಆರ್. ವಸ್ತ್ರದ, ಧಾರವಾಡ



## ಸೆಲ್ಫ್ ಹೀಲಿಂಗ್

ಡಿ. 12ರ ಸಂಚಿಕೆಯಲ್ಲಿ ಕರುಣಾ ಬಿ.ಎಸ್. ಬರೆದಿರುವ ಲೇಖನ ಮಾಹಿತಿಪೂರ್ಣವಾಗಿತ್ತು. ನಮ್ಮ ಕೆಲವು ದಿನಬಳಕೆಯ ವಸ್ತುಗಳಲ್ಲೂ ಸೆಲ್ಫ್ ಹೀಲಿಂಗ್ ವ್ಯವಸ್ಥೆಯಿದೆ ಎಂದು ತಿಳಿದು ಆಶ್ಚರ್ಯವಾಯಿತು. ಆದಷ್ಟು ಬೇಗ 'ಸ್ವಯಂ ಗುಣ ಆಗುವಿಕೆ' ಸಂಶೋಧನೆಯು ಪ್ರಚಲಿತಕ್ಕೆ ಬರಲಿ ಎಂಬುದೇ ನಮ್ಮ ಆಶಯ.

—ಅಶ್ವಿನಿ ಪಿ. ಕಲ್ಲಮಜಲು

## ಮನಗೆದ್ದ ಲಹರಿ

ಡಿ. 12ರ ಸಂಚಿಕೆಯಲ್ಲಿ ಪ್ರಕಟವಾದ ಧಾರಿಣಿ ಮಾಯಾ ಅವರ 'ಓ ಗಂಡಸರೇ, ನೀವೆಷ್ಟು ಅದೃಷ್ಟವಂತರು!' ಲೇಖನ ಬಹಳ ಸೊಗಸಾಗಿತ್ತು. ಸಾಮಾನ್ಯವಾಗಿ ಎಲ್ಲಾ ಮಹಿಳೆಯರ ಮನದಲ್ಲೂ ಮೂಡುವ ಆಲೋಚನೆಗಳು ಈ ಬರಹದಲ್ಲಿ ಸುಂದರವಾಗಿ ಮೂಡಿಬಂದಿದೆ

—ಮಾನಸ ಎಚ್.ಆರ್. ಮೈಸೂರು

## 5ಜಿ ಜಗಿತದ ಸಂಭ್ರಮ

ಡಿ. 5ರ ಸಂಚಿಕೆಯಲ್ಲಿ ಗುರುರಾಜ್ ದಾವಣಗೆರೆ ಅವರು ಬರೆದ 'ಓಡುವ ಜಗತ್ತಿಗೆ ಹೊಸ ಶಕ್ತಿಮದ್ದು' ಲೇಖನ ಕುತೂಹಲಕಾರಿಯಾಗಿತ್ತು. 5ಜಿಗೆ ಜಿಗಿಯಲು ಇಡೀ ಜಗತ್ತು ಸಜ್ಜಾಗಿದೆ. ಆದರೆ ಭಾರತದಲ್ಲಿ ಈ ಹೊಸ ತಂತ್ರಜ್ಞಾನವನ್ನು ಬರಮಾಡಿಕೊಳ್ಳಲು ಸಾಕಷ್ಟು ಸಿದ್ಧತೆಯ ಅವಶ್ಯಕತೆಯೂ ಇದೆ.

—ಮಹೇಶ್, ಮಧುರಾ ಸುಬ್ರಹ್ಮಣ್ಯ, ಬೆಂಗಳೂರು
ಪುಷ್ಪಾ ಶ್ರೀರಾಮ್, ಬೆಂಗಳೂರು

## ವಿಂಡ್ಸ್ ವೆಪ್ಟ್ ದ್ವೀಪದ ಗಾಳಿ

ಡಿ. 12ರ ಸಂಚಿಕೆಯಲ್ಲಿ ವಂಡರ್ ಪುಟದಲ್ಲಿ ವಿಂಡ್ಸ್ ವೆಪ್ಟ್ ದ್ವೀಪದಲ್ಲಿ ದೂರದಿಂದ ಬರುವ ಗಾಳಿಯ ವೇಗ ತಾಸಿಗೆ ಎರಡು ಸಾವಿರ ಮೈಲು ಎಂದಿದೆ. ಈ ವೇಗ ಎಂದಿಗೂ ಸಾಧ್ಯವಿಲ್ಲ. ಈ ವೇಗಕ್ಕೆ ಮರಗಳು ಹಾರಿ ಹೋಗುತ್ತವೆ. ಇದುವರೆಗಿನ ಭೂಮಿಯ ಮೇಲೆ ಅತಿ ಹೆಚ್ಚಿನ ದಾಖಲೆ ವೇಗ ತಾಸಿಗೆ 253 ಮೈಲು, ಆಸ್ಟ್ರೇಲಿಯಾ ದ್ವೀಪದಲ್ಲಿ.

—ಓ. ಪ್ರಭು , ಬೆಂಗಳೂರು

## ಆಟ ಮಕ್ಕಳಿಗೆ ಅಗತ್ಯ

ಡಿ. 12ರ ಸಂಚಿಕೆಯ 'ನಿಮ್ಮೊಡನೆ' ಪುಟದಲ್ಲಿ ಎನ್. ಉದಯಕುಮಾರ್ ಬರೆದಿರುವ ಬರಹ ತುಂಬ ಚೆನ್ನಾಗಿತ್ತು. ಆಟ, ಮಕ್ಕಳ ಆತ್ಮವಿಶ್ವಾಸವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ನಾಲ್ಕು ಗೋಡೆಗಳ ಮಧ್ಯೆ ಅತ್ಯಾಧುನಿಕ ಪರಿಕರಗಳೊಂದಿಗೆ ನೀಡುವ ಶಿಕ್ಷಣದ ಪ್ರಾಮುಖ್ಯದಷ್ಟೇ ಅವರು ಬಯಲಲ್ಲಿ ಆಡುವ ಆಟಕ್ಕೂ ಇದ್ದೇ ಇದೆ. ಇದನ್ನು ನಮ್ಮ ಶಿಕ್ಷಣವ್ಯವಸ್ಥೆ ಅರಿತುಕೊಳ್ಳಬೇಕು.

—ಅರವಿಂದ ಜಿ. ಜೋಷಿ, ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in